www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com

20 ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ ಬೆಂಗಳೂರು ನಗರ.

ಸಿ.ಸಿ.ನಂ.4981/2021

| | | |
|---|---|---|
| ಫಿರ್ಯಾದಿಯ ಹೆಸರು | ವಿರುದ್ಧ | ಎ ವಿ ರವಿಕುಮಾರ |
| ಆರೋಪಿಯ ಹೆಸರು | | ಮಂಗಾರಾಮ ಡಿ |

ಡಂಡ ಪ್ರ.ಸಂ.ಕಲಂ. 313 ರಡಿ ಆರೋಪಿಯ ಹೇಳಿಕೆ

ಪ್ರಶ್ನೆ.1) ನೀವು ಈ ಪ್ರಕರಣದಲ್ಲಿ ಫಿರ್ಯಾದಿಯು ನೀಡಿರುವ ಸಾಕ್ಷ್ಯವನ್ನು ತಿಳಿದುಕೊಂಡಿದ್ದೀರಾ?

ಉತ್ತರಃ ತಿಳಿಯಿತು.

ಪ್ರಶ್ನೆ.2) ಫಿರ್ಯಾದಿಃ ಪ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನಿಮ್ಮ ಹೊಣೆಗಾರಿಕೆಯ ವಿಮೋಚನೆಗಾಗಿ ದಿನಾಂಕಃ **02.01.2020** ರ ಚೆಕ್ ಸಂಖ್ಯೆಃ **'908761'** ರೂ.**4,00,000/-,** ಮೊತ್ತಕ್ಕೆ ಚೆಕ್ಕನ್ನು ನೀಡಿದ್ದು, ಅದನ್ನು ನಗದೀಕರಣಕ್ಕಾಗಿ ಬ್ಯಾಂಕಿಗೆ ಹಾಜರುಪಡಿಸಿದಾಗ **"ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ"** ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿದ್ದು, ಚೆಕ್ಕು ಅಮಾನ್ಯಗೊಂಡಿರುತ್ತದೆ ಎಂದು ಹೇಳಿರುತ್ತಾರೆ. ಇದಕ್ಕೆ ನೀವೇನು ಹೇಳಬಯಸುವಿರಾ?

ಉತ್ತರಃ ಸುಳ್ಳು.

ಪ್ರಶ್ನೆ.3) ಸದರಿ ಚೆಕ್ಕು ಅಮಾನ್ಯವಾದ ನಂತರ ಚೆಕ್ಕಿನ ಮೊತ್ತವನ್ನು ಕೊಡುವಂತೆ ಫಿರ್ಯಾದಿಯು ನಿಮಗೆ ನೊಂದಾಯಿತ ಅಂಚೆ ಮತ್ತು ಸ್ವೀಕೃತಿಯೊಂದಿಗೆ ನೋಟೀಸನ್ನು ಕಳಿಸಿದ್ದರು, ಆ ನೋಟೀಸು ನಿಮಗೆ ಜಾರಿಯಾದರೂ ಸಹ ನೀವು ಚೆಕ್ಕನ ಮೊತ್ತವನ್ನು ಸಂದಾಯ ಮಾಡಲಿಲ್ಲ ಎಂದು ಹೇಳಿದ್ದಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು.

This is a True Copy of the Court Records Online. Authenticated @ districts.ecourtsindia.com/cnr/KABC030160772021/truecopy/order-2.pdf

ಪ್ರಶ್ನೆ.4) ನೀವು ಇನ್ನೇನಾದರೂ ಹೇಳಬಯಸುವಿರಾ?

ಉತ್ತರಃ ನಾನು ಅವರಿಂದ ಕೇವಲ ರೂ.30,000/- ಪಡೆದಿದ್ದೇನೆ ಮತ್ತು ಈ ಚೆಕ್ಕನ್ನು ಆ ಹಣದ ಭದ್ರತೆಗೆ ಕೊಟ್ಟಿದ್ದೇನೆ, ಆದರೆ ಕರೋನಾ ಬಂದ ಪ್ರಯುಕ್ತ ಅವರ ರೂ.30,000/- ಹಣ ತಿರಿಸಲು ಆಗಲಿಲ್ಲ.

ಪ್ರಶ್ನೆ.5) ನಿಮ್ಮ ಪರ ಸಾಕ್ಷಗಳನ್ನು ವಿಚಾರಣೆ ಮಾಡಬಯಸುತ್ತೀರಾ?

ಉತ್ತರಃ ಸಾಕ್ಷಿ ಮಾಡುತ್ತೇನೆ.

(ಮೇಲೆ ಹೇಳಿದ ಪ್ರಶ್ನೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಕೇಳಿ ಅವರು ಕೊಟ್ಟ ಉತ್ತರಗಳನ್ನು ಆರೋಪಿ ಹೇಳಿದ ಪ್ರಕಾರ ನಾನೇ ಬರೆದುಕೊಂಡಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ 22.09.2023.

20ನೇ ಅ.ಮು.ಮ.ದಂ,
ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC030160772021/truecopy/order-2.pdf